ಓಎಸ್. ನಂ.173/2021
ಪಿ.ಡಬ್ಲ್ಯೂ : 1

**ದಿನಾಂಕ:31.05.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿಯರ ಪರ ಬಿ ಡಿ ಎ ವಕೀಲರಿಂದ:**

ನನ್ನ ಮದುವೆ ವಾದಿಯ ಜೊತೆ 30 ವರ್ಷಗಳ ಹಿಂದೆ ಆಗಿದೆ. ಮದುವೆಯಾದಾಗಿನಿಂದ ನಾನು ನನ್ನ ಹೆಂಡತಿ ನನ್ನ ಊರು ಕನ್ನಳ್ಳಿಯಲ್ಲಿ ವಾಸವಾಗಿರುತ್ತೇವೆ. ವಾದಿಯ ತಂದೆಗೆ ಇಬ್ಬರು ಅಣ್ಣ-ತಮ್ಮಂದಿರು. ಅವರೆಂದರೆ, ಹಣಮಂತ್ರಾಯ ಮತ್ತು ಮಲ್ಲಪ್ಪ. ಇವರಿಗೆ ಪಿತ್ರಾರ್ಜಿತ ಆಸ್ತಿಗಳೆಂದರೆ ಸರ್ವೆ ನಂ. 122,121 ಮತ್ತು 184 ಇರುತ್ತವೆ. ಇವುಗಳನ್ನು ಹೊರತುಪಡಿಸಿ ಇನ್ನು ಎರಡು ಜಮೀನುಗಳನ್ನು ಇವರು ಸ್ವಯಾರ್ಜಿತವಾಗಿ ಖರೀದಿಸಿರುತ್ತಾರೆ. ಇವರಿಬ್ಬರು ಜೀವಂತ ಇದ್ದಾಗ ಜಂಟಿಯಾಗಿಯೇ ಇದ್ದರು. ನನ್ನ ಮಾವ ಮಲ್ಲಪ್ಪನ ಹೆಸರಿನಲ್ಲಿ ಸರ್ವೆ ನಂ. 122, ಹಣಮಂತ್ರಾಯನ ಹೆಸರಿನಲ್ಲಿ 121 ಮತ್ತು 184 ಜಮೀನುಗಳು ಇದ್ದವು. ಸರ್ವೆ ನಂ. 121 ರಲ್ಲಿ 6 ಎಕರೆ 8 ಗುಂಟೆ ಮಲ್ಲಪ್ಪನ ಹೆಸರಿನಲ್ಲಿ ಇತ್ತು. ಇವರಿಬ್ಬರು ಅಣ್ಣ-ತಮ್ಮಂದಿರಾಗಿದ್ದರಿಂದ ವಾಟ್ನಿ ಮಾಡಿಕೊಂಡಿದ್ದರು.

ಪ್ರತಿವಾದಿ 2 ರವರ ಪರಿಚಯ ಇದೆ. ಪ್ರತಿವಾದಿ -2 ರವರು ಸಲ್ಲಿಸಿದ ಪ್ರತಿವಾದ ಪತ್ರದ ಅಂಶಗಳು ನನಗೆ ಗೊತ್ತಿವೆ. ಈ ಪ್ರತಿವಾದ ಪತ್ರದಲ್ಲಿ ಹಣಮಂತ್ರಾಯನು ಮೃತ್ಯು ಪತ್ರದ ಮೂಲಕ ತನ್ನ ಆಸ್ತಿಗಳನ್ನು ಪ್ರತಿವಾದಿ-2 ರವರಿಗೆ ಕೊಟ್ಟಿರುತ್ತಾನೆ ಅಂತ ನಮೂದಿಸಿರುತ್ತಾನೆ ಎನ್ನುವುದು ಗೊತ್ತಿದೆ ಆದರೆ ಅದನ್ನು ಸುಳ್ಳು ನಮೂದಿಸಿದ್ದಾನೆ. ಹಣಮಂತ್ರಾಯ ತೀರಿಕೊಂಡು 10 ವರ್ಷಗಳಾಗಿರಬಹುದು. ಆತನು ತೀರಿದ ನಂತರ ನಮಗೆ ಗೊತ್ತಿಲ್ಲದಂತೆ ಪ್ರತಿವಾದಿ-2 ತನ್ನ ಹೆಸರಿನಲ್ಲಿ ಪಹಣಿ ಮಾಡಿಕೊಂಡಿರುತ್ತಾನೆ. ಈ ರೀತಿ ಪಹಣಿಯಲ್ಲಿ ಹೆಸರು ಇರುವುದನ್ನು ನಾವು ಕಂದಾಯ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ. ಈ ರೀತಿ ಮೃತ್ಯು ಪತ್ರ ಬರೆದುಕೊಟ್ಟಿದ್ದಾನೆ ಅಂತ ಇತ್ತಿಚಿಗೆ ತಿಳಿದಿದ್ದರಿಂದ ನಾವು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ. ಹಣಮಂತ್ರಾಯನ ಹೆಸರಿನಲ್ಲಿ ಮನೆ ಸಹ ಇತ್ತು. ಈಗ ಪ್ರತಿವಾದಿ-2 ನಮಗೆ ತಿಳಿಯದಂತೆ ತನ್ನ ಹೆಸರಿನಲ್ಲಿ ಮಾಡಿಕೊಂಡಿರುತ್ತಾನೆ. ನಮಗೆ ಈಗ ತಿಳಿದಿದ್ದರಿಂದ ಅದನ್ನು ಪ್ರಶ್ನಿಸಿರುವುದಿಲ್ಲ.

**ಈ ಹಂತದಲ್ಲಿ ವಕೀಲರ ವಿನಂತಿ ಮೇರೆಗೆ ಮುಂದಿನ ಪಾಟೀ ಸವಾಲನ್ನು ಮುಂದೂಡಲಾಯಿತು.**

**ಮರು ವಿಚಾರಣೆ : ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.